## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2016-17ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುವಂತೆ ಭಾರತ ಸರ್ಕಾರದ ವಿದ್ಯುತ್ ಮಗ್ಗಗಳ ಆಧುನೀಕರಣ ಯೋಜನೆಯಡಿಯಲ್ಲಿ ವಿದ್ಯುತ್ ಮಗ್ಗಗಳನ್ನು ಉನ್ನತೀಕರಿಸಲು ರಾಜ್ಯ ಸರ್ಕಾರದ ವತಿಯಿಂದ ಸಹಾಯಧನ ಮಂಜೂರಾತಿಗಾಗಿ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ. 1. 2016-17 ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ಆಯವ್ಯಯ ಭಾಷಣ (ಕಂಡಿಕೆ-381)

2. ಜವಳಿ ಅಭಿವೃದ್ಧಿ ಆಯುಕ್ತರ ಪತ್ರ ಸಂಖ್ಯೆ: ಕೈಜಇ/ಜವಳಿ/ಎ-1/ಹೊ.ಯೋ/2016-17, ದಿನಾಂಕ: 13.05.2016, 20.06.2016 ಮತ್ತು 27.07.2016.

*********

**ಪ್ರಸ್ತಾವನೆ:**

ಓದಲಾದ (1) ರಂತೆ, 2016-17 ನೇ ಸಾಲಿನ ಆಯವ್ಯಯ ಭಾಷಣದಲ್ಲಿ ನೇಕಾರರ ಅಭಿವೃದ್ಧಿಗಾಗಿ ಈ ಕೆಳಕಂಡ ಕಾರ್ಯಕ್ರಮವನ್ನು ಪ್ರಸ್ತಾಪಿಸಲಾಗಿದೆ.

**"ಭಾರತ ಸರ್ಕಾರದ ವಿದ್ಯುತ್ ಮಗ್ಗಗಳ ಆಧುನೀಕರಣ ಯೋಜನೆಯಡಿಯಲ್ಲಿ ವಿದ್ಯುತ್ ಮಗ್ಗಗಳನ್ನು ಉನ್ನತೀಕರಿಸಲು ರಾಜ್ಯ ಸರ್ಕಾರದ ವತಿಯಿಂದ ಪ್ರತಿ ಮಗ್ಗಕ್ಕೆ ರೂ. 10,000 ಗಳ ಕೊಡುಗೆ."**

ಓದಲಾದ (2)ರ ಜವಳಿ ಅಭಿವೃದ್ಧಿ ಆಯುಕ್ತರ ಪತ್ರಗಳಲ್ಲಿ, ಕೇಂದ್ರ ಸರ್ಕಾರವು ತನ್ನ 12ನೇ ಪಂಚವಾರ್ಷಿಕ ಯೋಜನೆಯಡಿ (2013-14 ರಿಂದ 2016-17) ಜವಳಿ ಸಚಿವಾಲಯದ ಮೂಲಕ ಇನ್-ಸಿಟು (In- Situ Upgradation of plain powerloom for SSI powerloom Sector) ಯೋಜನೆಯಡಿ ವಿದ್ಯುತ್ ಮಗ್ಗಗಳ ಉನ್ನತೀಕರಣ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ. ಸದರಿ ಯೋಜನೆಯನ್ನು ಕರ್ನಾಟಕ ರಾಜ್ಯಕ್ಕೂ ವಿಸ್ತರಿಸಲಾಗಿರುತ್ತದೆ. ಕೇಂದ್ರ ಸರ್ಕಾರದ ಮೇಲಿನ ಯೋಜನೆಯಂತೆ ವಿದ್ಯುತ್ ಮಗ್ಗಗಳ ಆಧುನೀಕರಣಕ್ಕೆ ರೂ. 30,000/- ಗಳ ಯೋಜನಾ ವೆಚ್ಚವನ್ನು ನಿಗದಿಪಡಿಸಲಾಗಿದ್ದು ಇದರಲ್ಲಿ ಶೇ.50ರಷ್ಟು ಮಾತ್ರ ಅಂದರೆ ರೂ. 15,000/- ಕೇಂದ್ರ ಸರ್ಕಾರವು ಸಹಾಯಧನವಾಗಿ ಒದಗಿಸುತ್ತಿದೆ. ಉಳಿದ ಶೇ.50ರಷ್ಟು ರೂ. 15,000/- ಫಲಾನುಭವಿಗಳು ಭರಿಸಬೇಕಾಗಿರುತ್ತದೆ. ಆದರೆ ಕರ್ನಾಟಕ ರಾಜ್ಯದಲ್ಲಿನ ವಿದ್ಯುತ್ ಮಗ್ಗ ನೇಕಾರ ಫಲಾನುಭವಿಗಳು ಈ ಯೋಜನೆಯಡಿ ಶೇ.50ರಷ್ಟು ವಂತಿಗೆಯನ್ನು ಒದಗಿಸಲು ಅಶಕ್ತರಾದ ಕಾರಣ ರಾಜ್ಯ ಸರ್ಕಾರವು ಇದನ್ನು ಮನಗೊಂಡು ಕೇಂದ್ರ ಸರ್ಕಾರವು ಈಗಾಗಲೇ ನೀಡುತ್ತಿರುವ ಸಹಾಯಧನಕ್ಕೆ ಹೆಚ್ಚುವರಿಯಾಗಿ ಅಂದರೆ ರೂ. 10,000/- ಗಳನ್ನು ರಾಜ್ಯ ಸರ್ಕಾರದ ವತಿಯಿಂದ ಈ ಯೋಜನೆಯಡಿ

Office of the Commissioner For Textiles
No 419
Date 3/8/16
Bangalore

ಒದಗಿಸುವುದರಿಂದಾಗಿ. ಫಲಾನುಭವಿಗಳು ಕೇವಲ ರೂ.5,000/- ಗಳನ್ನು ಮಾತ್ರ ಸ್ವಂತ ವಂತಿಗೆಯಾಗಿ ಭರಿಸಬಹುದಾಗಿದೆ. ಈ ಹೊಸ ಯೋಜನೆಯನ್ನು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆಯನ್ನು ನೀಡುವಂತೆ ಕೋರಿರುತ್ತಾರೆ.

ಜವಳಿ ಅಭಿವೃದ್ಧಿ ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ವಾಕೈ 28 ಜಕೈಯೋ 2016 ಬೆಂಗಳೂರು, ದಿನಾಂಕ: 23.08.2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕೈಮಗ್ಗ ಮತ್ತು ಜವಳಿ ಇಲಾಖೆಯ 2016-17ನೇ ಸಾಲಿನ ನೇಕಾರರ ವಿಶೇಷ ಪ್ಯಾಕೇಜ್ ಯೋಜನೆ ಅಡಿ, ವಿದ್ಯುತ್ ಮಗ್ಗಗಳನ್ನು ಉನ್ನತೀಕರಿಸಲು ರಾಜ್ಯ ಸರ್ಕಾರದ ವತಿಯಿಂದ ಪ್ರತಿ ಮಗ್ಗಕ್ಕೆ ರೂ. 10,000 ಗಳ ಸಹಾಯಧನವನ್ನು ಮಂಜೂರು ಮಾಡಲು ಕೆಳಕಂಡ ಷರತ್ತಿಗೆ ಒಳಪಟ್ಟು ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರದ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ.

1. ಕೇಂದ್ರ ಸರ್ಕಾರದ ಅಧಿಸೂಚನೆಯ ಸಂಖ್ಯೆ: ನಂ. 01/22/2015-ಪಿಎಲ್ ದಿನಾಂಕ: 23.12.2015ರ ಅನ್ವಯ ಈ ಯೋಜನೆಯ ಸೌಲಭ್ಯವನ್ನು ಬೆಂಗಳೂರು ಮತ್ತು ಬೆಳಗಾವಿ ಜಿಲ್ಲೆಯ ವಿದ್ಯುತ್ ಮಗ್ಗ ನೇಕಾರರಿಗೆ ಮಾತ್ರ ಒದಗಿಸತಕ್ಕದ್ದು.
2. 2016-17ನೇ ಸಾಲಿನ ಆಯವ್ಯಯದಲ್ಲಿ ನಿಗದಿಪಡಿಸಿದ ಅನುದಾನದ ಮಿತಿಗೆ ಒಳಪಟ್ಟು ಯೋಜನೆಯನ್ನು ಅನುಷ್ಠಾನಗೊಳಿಸತಕ್ಕದ್ದು.
3. ಕೇಂದ್ರ ಸರ್ಕಾರದ ಸಹಾಯಧನ ಪಡೆದ ನಂತರ ವಷ್ಟೆ ರಾಜ್ಯ ಸರ್ಕಾರದ ಸಹಾಯಧನವನ್ನು ಬಿಡುಗಡೆ ಮಾಡತಕ್ಕದ್ದು.
4. ಅರ್ಹ ಫಲಾನುಭವಿಗಳನ್ನು ಗುರುತಿಸಿ ನಿರ್ಧಿಷ್ಟ ಪಡಿಸಿದ ಅವಧಿಯೊಳಗೆ ಎಲ್ಲಾ ಫಲಾನುಭವಿಗಳಿಗೆ ಆರ್ಥಿಕ ನೆರವು ನೀಡುವುದು ಹಾಗೂ ಒಂದು ವರ್ಷದ ನಂತರ ಯೋಜನೆಯ ಉಪಯುಕ್ತತ್ತೆ ಬಗ್ಗೆ ಮೌಲ್ಯಮಾಪನ ಮಾಡಿ ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

ಈ ಯೋಜನೆಗೆ ತಗಲುವ ವೆಚ್ಚವನ್ನು 2016-17ನೇ ಸಾಲಿನ ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯ ಲೆಕ್ಕ ಶೀರ್ಷಿಕೆ: 2851-00-103-0-62 (ಯೋಜನೆ) ಅಡಿಯಲ್ಲಿ ಹಂಚಿಕೆ ಮಾಡಲಾದ ಅನುದಾನದಲ್ಲಿ ಗರಿಷ್ಠ ರೂ. 250.00 ಲಕ್ಷಗಳನ್ನು ಮಾತ್ರ ವೆಚ್ಚ ಭರಿಸತಕ್ಕದ್ದು.

ಜವಳಿ ಅಭಿವೃದ್ಧಿ ಆಯುಕ್ತರ ಪರಿವೀಕ್ಷಣೆ ಮತ್ತು ಸಲಹೆಯೊಂದಿಗೆ ಅನುಬಂಧದಲ್ಲಿ ಲಗತ್ತಿಸಿರುವ ಯೋಜನೆಯ ಮಾರ್ಗಸೂಚಿಯಂತೆ ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮದ ಮೂಲಕ ಯೋಜನೆಯನ್ನು ಅನುಷ್ಠಾನಗೊಳಿಸತಕ್ಕದ್ದು.

ಯಂತ್ರೋಪಕರಣಗಳ ಖರೀದಿಯನ್ನು ಪಾರದರ್ಶಕ ನಿಯಮ ಕೆ.ಟಿ.ಪಿ.ಪಿ ಕಾಯ್ದೆಯಂತೆ ಹಾಗೂ ಇದರೊಂದಿಗೆ ಲಗತ್ತಿಸಿರುವ ಮಾರ್ಗಸೂಚಿಯಂತೆ ನಡೆಸತಕ್ಕದ್ದು.

ಈ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿ 13 ಎಫ್‌ಆರ್‌ಓ 2016, ದಿನಾಂಕ: 18.08.2016 ಮತ್ತು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 219 ವೆಚ್ಚ-1/2016, ದಿನಾಂಕ: 07.06.2016 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಕೆ. ಬೋರಲಿಂಗಯ್ಯ)**
ಸರ್ಕಾರದ ಉಪ ಕಾರ್ಯದರ್ಶಿ (ಜವಳಿ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ರಾಜ್ಯ ಸಂಕಲನಕಾರರು, ಬೆಂಗಳೂರು ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು,

**ಪ್ರತಿ:**

1. ಮಹಾಲೇಖಪಾಲರು, (ಲೆಕ್ಕ ಪತ್ರ), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸ ಸೌಧ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿ-ವೆಚ್ಚ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
5. ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಬೆಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿ., 6ನೇ ಮಹಡಿ, ಡಿ.ಜೆ.ಸಿ. ಸಂಕೀರ್ಣ, ಒಕ್ಕಲಿಗರ ಭವನ, ಕಿತ್ತೂರು ರಾಣಿ ಚೆನ್ನಮ್ಮ ವೃತ್ತ, ಬೆಂಗಳೂರು-560 027
7. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿ., ಪ್ರಿಯದರ್ಶಿನಿ ನೇಕಾರರ ಭವನ, ಹಲಸೂರು, ಬೆಂಗಳೂರು.
8. ಕಾರ್ಯದರ್ಶಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, 3ನೇ ಮಹಡಿ, ವಿಧಾನಸೌಧ, ಬೆಂಗಳೂರು.
9. ಆಂತರಿಕ ಆರ್ಥಿಕ ಸಲಹೆಗಾರರು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ. ಬೆಂಗಳೂರು.
10. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ ವೆಚ್ಚ-1, ವಿಧಾನ ಸೌಧ, ಬೆಂಗಳೂರು.
11. ಸಹಾಯಕ ನಿರ್ದೇಶಕರು, ಸಂಶೋಧನಾ ಮತ್ತು ಉಲ್ಲೇಖನಾ ಶಾಖೆ, ಕರ್ನಾಟಕ ವಿಧಾನ ಸಭೆ ಸಚಿವಾಲಯ, ಕೊಠಡಿ ಸಂಖ್ಯೆ: 19, ನೆಲಮಹಡಿ ವಿಧಾನ ಸೌಧ, ಬೆಂಗಳೂರು.
12. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
13. ಜಂಟಿ ನಿರ್ದೇಶಕರು, ಜಿಲ್ಲಾ ಖಜಾನೆ, ಬೆಂಗಳೂರು.
14. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಕರ್ನಾಟಕ ಸರ್ಕಾರ

## ಕೇಂದ್ರ ಪುರಸ್ಕೃತ ಇನ್‌ಸಿಟು ಯೋಜನೆಯಡಿ ವಿದ್ಯುತ್ ಮಗ್ಗಗಳ ಉನ್ನತೀಕರಣಕ್ಕೆ ರಾಜ್ಯ ಸರ್ಕಾರ ಸಹಾಯಧನ ನೀಡಿ ಯೋಜನೆ ಅನುಷ್ಠಾನಗೊಳಿಸುವ ಮಾರ್ಗಸೂಚಿ

**ಸಂಖ್ಯೆ: ವಾಕೈ 28 ಜಕೈಯೋ 2016, ದಿನಾಂಕ: 23.08.2016**

ಕೇಂದ್ರ ಸರ್ಕಾರವು ತನ್ನ 12ನೇ ಪಂಚವಾರ್ಷಿಕ ಯೋಜನೆಯಡಿ (2013–14 ರಿಂದ 2016–17) ಜವಳಿ ಸಚಿವಾಲಯದ ಮೂಲಕ ಇನ್–ಸಿಟು (In- Situ Upgradation of plain powerloom for SSI powerloom Sector) ಯೋಜನೆಯಡಿ ವಿದ್ಯುತ್ ಮಗ್ಗಗಳ ಉನ್ನತೀಕರಣ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ. ಸದರಿ ಯೋಜನೆಯನ್ನು ಕರ್ನಾಟಕ ರಾಜ್ಯಕ್ಕೂ ವಿಸ್ತರಿಸಲಾಗಿರುತ್ತದೆ. ಈ ಯೋಜನೆಯಡಿ ವಿದ್ಯುತ್ ಮಗ್ಗಗಳ ಉನ್ನತೀಕರಣಕ್ಕೆ ಈ ಮುಂದೆ ಪಟ್ಟಿ ಮಾಡಲಾದ ಜೋಡಣೆಗಳನ್ನು ವಿದ್ಯುತ್ ಮಗ್ಗಗಳಿಗೆ ಅಳವಡಿಸಲು ಸಹಾಯಧನವನ್ನು ಕೇಂದ್ರ ಸರ್ಕಾರವು ಒದಗಿಸುತ್ತಿದೆ.

i) Weft stop motion (Optical Weft Feeler)
ii) Warp stop motion (Electro mechanical warp stop motion for spun yarn or photocell type for filament yarn with loom stopping mechanism).
iii) Semi-positive let off motion
iv) Efficient braking device (electro-mechanical).
iv) Anti Crack device.
v) Replacement of metallic parts by self-lubricating nylon parts (like shedding roller, picking cams, picking bowl, crank bushes etc. having life more than 2 years)
vi) Mechanical Dobby (steel)
vii) Jacquard (steel).

ಕೇಂದ್ರ ಸರ್ಕಾರದ ಯೋಜನೆಯಂತೆ ಸಹಾಯಧನದ ವಿವರ ಇಂತಿದೆ:

I. Govt. of India shall provide financial assistance to the extent of 50% of the cost of the up gradation attachments / kits, dobby and jacquard subject to maximum subsidy of Rs. 15,000/- per power loom and the maximum subsidy to a power loom unit holding eight power looms would be Rs. 1,20,000/-.
II. Office of TXC would prescribe maximum rates for these admissible attachments from time to time on enrolling / registering the manufactures of the attachments / kits.
III. The above subsidy will be extended for both credit linked or otherwise.
IV. A beneficiary who is already covered / has availed benefit under the scheme would be eligible to get fresh benefit of the scheme for subsequent looms owned by the unit only after a period of three years.

ಕೇಂದ್ರ ಸರ್ಕಾರದ ಮೇಲಿನ ಯೋಜನೆಯಂತೆ ವಿದ್ಯುತ್ ಮಗ್ಗಗಳ ಆಧುನೀಕರಣಕ್ಕೆ ರೂ.30000/– ಗಳ ಯೋಜನಾ ವೆಚ್ಚವನ್ನು ನಿಗದಿಪಡಿಸಲಾಗಿದ್ದು ಇದರಲ್ಲಿ ಶೇ.50ರಷ್ಟು ಮಾತ್ರ ಅಂದರೆ ರೂ.15000/– ಕೇಂದ್ರ ಸರ್ಕಾರವು ಸಹಾಯಧನವಾಗಿ ಒದಗಿಸುತ್ತಿದೆ. ಉಳಿದ ಶೇ.50ರಷ್ಟು ರೂ.15000/– ಫಲಾನುಭವಿಗಳು ಭರಿಸಬೇಕಾಗಿರುತ್ತದೆ. ಆದರೆ ಕರ್ನಾಟಕ ರಾಜ್ಯದಲ್ಲಿನ ವಿದ್ಯುತ್ ಮಗ್ಗ ನೇಕಾರ ಫಲಾನುಭವಿಗಳು ಈ ಯೋಜನೆಯಡಿ ಶೇ.50ರಷ್ಟು ವಂತಿಗೆಯನ್ನು ಒದಗಿಸಲು ಅಶಕ್ತರಾದ ಕಾರಣ ಕೇಂದ್ರ ಸರ್ಕಾರವು ಈಗಾಗಲೇ ನೀಡುತ್ತಿರುವ ಸಹಾಯಧನಕ್ಕೆ ಹೆಚ್ಚುವರಿಯಾಗಿ ಅಂದರೆ ರೂ.10000/– ಗಳನ್ನು ರಾಜ್ಯ ಸರ್ಕಾರದ ವತಿಯಿಂದ ಈ ಯೋಜನೆಯಡಿ ಒದಗಿಸಲು ಅವಕಾಶ ಕಲ್ಪಿಸಲಾಗಿದೆ. ಇದರಿಂದಾಗಿ ಫಲಾನುಭವಿಗಳು ಕೇವಲ ರೂ.5000/– ಗಳನ್ನು ಮಾತ್ರ ಸ್ವಂತ ವಂತಿಗೆಯಾಗಿ ನೀಡಬೇಕಾಗುತ್ತದೆ.

**ಯೋಜನೆಯ ಮೂಲ ಉದ್ದೇಶಗಳು:**

1. ರಾಜ್ಯದ ವಿದ್ಯುತ್ ಮಗ್ಗ ಕೈಗಾರಿಕೆಯನ್ನು ಆಧುನೀಕರಣ ಹಾಗೂ ಉನ್ನತೀಕರಣಗೊಳಿಸಿ ನೇಕಾರರ ಉತ್ಪನ್ನಗಳಿಗೆ ಉತ್ತಮ ಮೌಲ್ಯ ಒದಗಿಸಿ ಕೊಡುವುದು. ಆ ಮೂಲಕ ಉತ್ಪನ್ನಗಳಿಗೆ ಸ್ಪರ್ಧಾತ್ಮಕವಾಗಿ ಉತ್ತಮ ಗುಣಮಟ್ಟ ಹಾಗೂ ಉನ್ನತೀಕೃತ ವಿನ್ಯಾಸದೊಂದಿಗೆ ಮಾರುಕಟ್ಟೆ ಒದಗಿಸುವುದು.
2. ಕೇಂದ್ರ ಸರ್ಕಾರದ ಯೋಜನೆಯ ಲಾಭ ಪಡೆಯಲು ರಾಜ್ಯ ಸರ್ಕಾರದ ಸಹಾಯಧನದೊಂದಿಗೆ ಪರಿಣಾಮಕಾರಿಯಾಗಿ ಯೋಜನೆಯ ಜಾರಿಗೆ ತರಲು ಪ್ರೋತ್ಸಾಹಿಸುವುದು.
3. ಕೇಂದ್ರ ಸರ್ಕಾರದ ಯೋಜನೆಯಡಿ ನಿಗದಿಪಡಿಸಿದ ಫಲಾನುಭವಿಯ ವಂತಿಗೆಯನ್ನು ಕಡಿಮೆ ಮಾಡುವುದು.

**ಫಲಾನುಭವಿಗಳ ಅರ್ಹತೆ:**

1) ವಿದ್ಯುತ್ ಮಗ್ಗ ಘಟಕವು ಕೇಂದ್ರ ಸರ್ಕಾರವು ನಿಗದಿಪಡಿಸಿರುವ ಪರ್ಮಿಟ್ ಅಥವಾ ಕೇಂದ್ರ ಸರ್ಕಾರದ ಜವಳಿ ಇಲಾಖೆ ವತಿಯಿಂದ ನೀಡಲಾದ ಸ್ವೀಕೃತಿ ಪತ್ರ ಅಥವಾ ಸಣ್ಣ ಪ್ರಮಾಣದ ಕೈಗಾರಿಕೆಗಳ ನೊಂದಣಿ ಪತ್ರ ಅಥವಾ ಘಟಕಗಳ ಮಾಲೀಕರ ವಿಳಾಸದ ವಿದ್ಯುತ್‌ಚಕ್ತಿ ಬಿಲ್ಲುಗಳ ಇತ್ತೀಚಿನ ದೃಢೀಕರಣ ಪತ್ರ ಹೊಂದಿರತಕ್ಕದ್ದು.
2) ವಿದ್ಯುತ್ ಮಗ್ಗ ಘಟಕವು ಚಾಲ್ತಿಯಲ್ಲಿರುವ ಗರಿಷ್ಠ 8 ಸಾಧಾರಣ ವಿದ್ಯುತ್ ಮಗ್ಗಗಳನ್ನು ಹೊಂದಿರತಕ್ಕದ್ದು. 4 ಹಾಗೂ ಕಡಿಮೆ ಸಾಧಾರಣ ವಿದ್ಯುತ್ ಮಗ್ಗಗಳನ್ನು ಹೊಂದಿರುವ ಘಟಕಗಳಿಗೆ ಆದ್ಯತೆಯನ್ನು ನೀಡತಕ್ಕದ್ದು.
3) ವಿದ್ಯುತ್ ಮಗ್ಗ ಘಟಕಗಳು ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದಲ್ಲಿ ಕಟ್ಟಡದ ಮಾಲೀಕರಿಂದ ವಿದ್ಯುತ್‌ಚಕ್ತಿ ಒದಗಿಸಿರುವ ಬಗ್ಗೆ ಮಾಡಿಕೊಂಡಿರುವ ಮೂಲ ಕರಾರು ಪತ್ರ ನೀಡತಕ್ಕದ್ದು.

**ಈ ಯೋಜನೆಯಡಿ ಪರಿಗಣಿಸಲಾಗುವ ವಿದ್ಯುತ್ ಮಗ್ಗಗಳ ಉನ್ನತೀಕರಣ ಜೋಡಣೆಗಳು:**

ಅ) ಸಾದಾ ವಿದ್ಯುತ್ ಮಗ್ಗಗಳಿಂದ ಸೆಮಿ ಆಟೋಮ್ಯಾಟಿಕ್ ಮಗ್ಗಗಳಿಗೆ ಉನ್ನತೀಕರಣಕ್ಕೆ;

i) Weft stop motion (Optical Weft Feeler)

ii) Warp stop motion (Electro mechanical warp stop motion for spun yarn or photocell type for filament yarn with loom stopping mechanism).

..3

iii) Semi-positive let off motion
iv) Efficient braking device (electro-mechanical).
v) Anti Crack device.
vi) Replacement of metallic parts by self-lubricating nylon parts (like shedding roller, picking cams, picking bowl, crank bushes etc. having life more than 2 years)
vii) Mechanical Dobby (steel)
viii) Jacquard (steel)
ix) Pirn winding machine

**ಆ) ಸೆಮಿ ಆಟೋಮ್ಯಾಟಿಕ್ ಲಾಳಿ ವಿದ್ಯುತ್ ಮಗ್ಗಗಳಿಂದ ಲಾಳಿ ರಹಿತ ರೇಪಿಯರ್ ಮಗ್ಗಗಳ ಉನ್ನತೀಕರಣಕ್ಕಾಗಿ;**

i) Rapier Kit

**ಯೋಜನಾ ವೆಚ್ಚ ಹಾಗೂ ಸಹಾಯಧನಗಳ ಪರಿಮಾಣ:**

ಯೋಜನಾ ವೆಚ್ಚ ಹಾಗೂ ಸಹಾಯಧನದ ಪರಿಮಾಣಗಳನ್ನು **ಅನುಬಂಧ–1** ರಲ್ಲಿ ಲಗತ್ತಿಸಲಾಗಿದೆ.

**ಯೋಜನೆ ಅನುಷ್ಠಾನಕ್ಕೆ ಅನುಸರಿಸಬೇಕಾದ ಕಾರ್ಯವಿಧಾನಗಳು:**

1. ಕೇಂದ್ರ ಸರ್ಕಾರದ ಮಾರ್ಗ ಸೂಚಿಯಂತೆ ಅರ್ಹವಿರುವ ಘಟಕಗಳನ್ನು ಗುರುತಿಸತಕ್ಕದ್ದು.
2. ಕೇಂದ್ರ ಸರ್ಕಾರದ ಯೋಜನೆಯಡಿ ಅನುಮೋದನೆಗೊಂಡ ಘಟಕಗಳಿಗೆ ಈ ಯೋಜನೆಯನ್ನು ವಿಸ್ತರಿಸತಕ್ಕದ್ದು.
3. ಕೇಂದ್ರ ಸರ್ಕಾರದ ಸಹಾಯಧನ ಪಡೆದ ಘಟಕಗಳಿಗೆ ಅರ್ಹವಿರುವ ರಾಜ್ಯ ಸರ್ಕಾರದ ಸಹಾಯಧನವನ್ನು ಉನ್ನತೀಕರಣಗೊಳಿಸಿದ ನಂತರ ನೇರವಾಗಿ ಫಲಾನುಭವಿಗೆ (ಸ್ವಂತ ಖರ್ಚಿನಿಂದ ನಿರ್ವಹಿಸಿದ್ದಲ್ಲಿ) ಅಥವಾ ಅಧಿಕೃತ ಸರಬರಾಜುದಾರರಿಗೆ (ಸಾಲದ ಮೂಲಕ ನಿರ್ವಹಿಸಿದ್ದಲ್ಲಿ) ಕೇಂದ್ರ ಸರ್ಕಾರವು ನಿಗದಿಪಡಿಸಿರುವ ಎಲ್ಲಾ ಮಾರ್ಗಸೂಚಿಗಳನ್ನು ಅನುಸರಿಸಿರುವುದನ್ನು ಖಾತ್ರಿಪಡಿಸಿಕೊಂಡು ಬಿಡುಗಡೆ ಮಾಡತಕ್ಕದ್ದು.
4. ಫಲಾನುಭವಿಯು ತಪ್ಪು ಮಾಹಿತಿಯನ್ನು ನೀಡಿ ಸಹಾಯಧನ ಪಡೆದಿರುವುದು ಕಂಡು ಬಂದಲ್ಲಿ ಅಂತಹ ಫಲಾನುಭವಿಯಿಂದ ನಿಯಮಾನುಸಾರ ಸಹಾಯಧನದ ಮೊತ್ತವನ್ನು ಬಡ್ಡಿ ಸಮೇತ ವಸೂಲು ಮಾಡುವ ಅಧಿಕಾರವು ನಿಗಮವು ಹೊಂದಿರತಕ್ಕದ್ದು.
5. ಈ ಯೋಜನೆಯ ಪ್ರಯೋಜನ ಪಡೆಯುವ ಫಲಾನುಭವಿಗಳು ನಿಗದಿತ ನಮೂನೆಯಲ್ಲಿ ಒಡಂಬಡಿಕೆಯನ್ನು ನಿಗಮದೊಂದಿಗೆ ಮಾಡಕೊಳ್ಳತಕ್ಕದ್ದು.

ಬಿ) **ಫಲಾನುಭವಿಗಳ ಅರ್ಹತೆ:**

1. 1 ರಿಂದ 8 ಸ್ವಂತ ವಿದ್ಯುತ್ ಮಗ್ಗಗಳ ಘಟಕ ಹೊಂದಿರತಕ್ಕದ್ದು.
2. ಪರಿಶಿಷ್ಟ ಜಾತಿಯ ಫಲಾನುಭವಿಗಳಿಗೆ ಶೇ.75 ರಷ್ಟು, ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಶೇ.90 ರಷ್ಟು, ಹಾಗೂ ಸಾಮಾನ್ಯ ವರ್ಗದ ವಿದ್ಯುತ್ ಮಗ್ಗ ನೇಕಾರರಿಗೆ ಶೇ.50 ರಷ್ಟು ಘಟಕದ ವೆಚ್ಚದಲ್ಲಿ ರಿಯಾಯಿತಿ ಇರುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಜಾತಿ ಹಾಗೂ ಆದಾಯ ಪ್ರಮಾಣ ಪತ್ರಗಳನ್ನು ನೀಡತಕ್ಕದ್ದು.

...4

**ಯೋಜನೆ ಅನುಷ್ಠಾನಕ್ಕೆ ಅನುಸರಿಸಬೇಕಾದ ಸಾಮಾನ್ಯ ಕಾರ್ಯವಿಧಾನಗಳು:**

1. ನಿಗದಿತ ಅರ್ಜಿ ನಮೂನೆಗಳನ್ನು ಅಗತ್ಯ ದಾಖಲಾತಿಗಳೊಂದಿಗೆ ಬೆಳಗಾವಿ ಮತ್ತು ಬೆಂಗಳೂರಿನಲ್ಲಿ ಇರುವ ವಿದ್ಯುತ್ ಮಗ್ಗ ಸೇವಾ ಕೇಂದ್ರಗಳಲ್ಲಿ ಸ್ವೀಕರಿಸಲಾಗುವುದು.
2. ಸ್ವೀಕೃತವಾದ ಅರ್ಜಿಗಳನ್ನು ಕ್ರೋಢೀಕರಿಸಿ ವಿದ್ಯುತ್ ಮಗ್ಗ ಸೇವಾ ಕೇಂದ್ರದ ಅಧಿಕಾರಿಗಳು ಪರಿಶೀಲಿಸಿ ಕೇಂದ್ರ ಸರ್ಕಾರದ ಜವಳಿ ಆಯುಕ್ತರ ಪ್ರಾದೇಶಿಕ ಕಚೇರಿಗೆ ಸಲ್ಲಿಸತಕ್ಕದ್ದು.
3. ಕೇಂದ್ರ ಸರ್ಕಾರದ ಜವಳಿ ಆಯುಕ್ತರ ಪ್ರಾದೇಶಿಕ ಕಚೇರಿ ಅಧಿಕಾರಿಗಳು, ಕೈಮಗ್ಗ ಮತ್ತು ಜವಳಿ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ವಿದ್ಯುತ್ ಮಗ್ಗ ಸೇವಾ ಕೇಂದ್ರದ ಅಧಿಕಾರಿಗಳು ಸೇರಿ ಜಂಟಿಯಾಗಿ ಪರಿಶೀಲನೆ ನಡೆಸಿ ಅರ್ಹ ಫಲಾನುಭವಿಗಳ ಪಟ್ಟಿಯನ್ನು ಅಂತಿಮಗೊಳಿಸತಕ್ಕದ್ದು.
4. ನಿಗಮದಲ್ಲಿ ಈ ರೀತಿ ಸ್ವೀಕೃತಿಯಾದ ಅರ್ಜಿಗಳನ್ನು ಪರಿಶೀಲಿಸಿ ಅಂತಿಮ ಫಲಾನುಭವಿಗಳ ಪಟ್ಟಿಯಂತೆ ಘಟಕಗಳಿಗೆ ಉಪಕರಣಗಳನ್ನು ಪೂರೈಸಲು ಕೇಂದ್ರ ಸರ್ಕಾರದ ಜವಳಿ ಆಯುಕ್ತರ ಪ್ರಾದೇಶಿಕ ಕಚೇರಿ ಅಧಿಕಾರಿಗಳು ಮಂಜೂರಾತಿ ನೀಡಿ ಕಾರ್ಯಾದೇಶ ಹೊರಡಿಸುವರು.
5. ಕೇಂದ್ರ ಸರ್ಕಾರದ ಜವಳಿ ಆಯುಕ್ತರ ಪ್ರಾದೇಶಿಕ ಕಚೇರಿ ಅಧಿಕಾರಿಗಳು ಕೇಂದ್ರ ಸರ್ಕಾರದ ಸಹಾಯಧನದ ಮೊತ್ತವನ್ನು ಉಪಕರಣಗಳನ್ನು ಪೂರೈಸಿದ ಸಂಸ್ಥೆಗೆ ನೇರವಾಗಿ ಬಿಡುಗಡೆ ಮಾಡತಕ್ಕದ್ದು.
6. ನಿಗಮದ ವತಿಯಿಂದ ರಾಜ್ಯ ಸರ್ಕಾರದ ಸಹಾಯಧನದ ಮೊತ್ತವನ್ನು ಉಪಕರಣಗಳನ್ನು ಪೂರೈಸಿದ ಸಂಸ್ಥೆಗೆ ನೇರವಾಗಿ ಬಿಡುಗಡೆ ಮಾಡತಕ್ಕದು.
7. ಫಲಾನುಭವಿಯ ಅರ್ಹತೆ, ಯೋಜನೆ ಅನುಷ್ಠಾನದ ಕಾರ್ಯ ವಿಧಾನಗಳಲ್ಲಿ ಕೇಂದ್ರ ಸರ್ಕಾರವು ನಿಗದಿಪಡಿಸಿರುವ ಮಾರ್ಗಸೂಚಿಗಳನ್ನು ಅನುಸರಿಸತಕ್ಕದ್ದು.

**ಯೋಜನೆಯ ಅನುಷ್ಠಾನದ ಪರಿಮಿತಿಗಳು:**

ಈ ಯೋಜನೆಯು ಕೇಂದ್ರ ಪುರಸ್ಕೃತ ಹಾಗೂ ರಾಜ್ಯ ಸರ್ಕಾರದ ಸಹಾಯಧನದ ಯೋಜನೆಯಾಗಿದ್ದು ಕರ್ನಾಟಕ ರಾಜ್ಯ ಜವಳಿ ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಮೂಲಕ ಅನುಷ್ಠಾನಗೊಳಿಸಲಾಗುತ್ತದೆ. ಈ ಯೋಜನೆಯ ಅನುಷ್ಠಾನದಲ್ಲಿ ಮಾರ್ಗಸೂಚಿಗಳ ಬಗ್ಗೆ ಅಗತ್ಯ ಬದಲಾವಣೆಗಳನ್ನು ತರುವ ಅಥವಾ ಯಾವುದೇ ಹಂತದಲ್ಲೇ ಯೋಜನೆಯನ್ನು ಸ್ಥಗಿತಗೊಳಿಸುವ ಅಧಿಕಾರ ರಾಜ್ಯ ಸರ್ಕಾರಕ್ಕೆ ಇರುತ್ತದೆ. ಯೋಜನೆಯ ಅನುಷ್ಠಾನದಲ್ಲಿ ಉಂಟಾಗುವ ಯಾವುದೇ ಗೊಂದಲಗಳ ಬಗ್ಗೆ ಸರ್ಕಾರದ ತೀರ್ಮಾನವೇ ಅಂತಿಮವಾಗಿರುತ್ತದೆ.

**(ಕೆ. ಬೋರಲಿಂಗಯ್ಯ)**
ಸರ್ಕಾರದ ಉಪ ಕಾರ್ಯದರ್ಶಿ (ಜವಳಿ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

# ಅನುಬಂಧ-I

## ಯೋಜನಾ ವೆಚ್ಚ ಹಾಗೂ ಸಹಾಯಧನಗಳ ಪರಿಮಾಣ

| ವರ್ಗ | ಶೇಕಡಾ ವಾರು ಸಹಾಯ ಧನದ | ಸಾದಾ ಮಗ್ಗದಿಂದ ಸೆಮೀ ಆಟೋಮ್ಯಾಟಿಕ್ ಲಾಳಿ ಮಗ್ಗಗಳಿಗೆ ಉನ್ನತೀಕರಣ | | | | ಸೆಮೀ ಆಟೋಮ್ಯಾಟಿಕ್ ಲಾಳಿ ಮಗ್ಗಗಳಿಂದ ಲಾಳಿ ರಹಿತ ರೇಪಿಯರ್ ಮಗ್ಗಗಳಿಗೆ ಉನ್ನತೀಕರಣ (ರೇಪಿಯರ್ ಕಿಟ್ ಅಳವಡಿಕೆ) | | | | ಸಾದಾ ಮಗ್ಗದಿಂದ ಲಾಳಿ ರಹಿತ ರೇಪಿಯರ್ ಮಗ್ಗಗಳಿಗೆ ಉನ್ನತೀಕರಣ (ರೇಪಿಯರ್ ಕಿಟ್ ಸೇರಿದಂತೆ ಉನ್ನತೀಕರಣ) | | | |
|---|---|---|---|---|---|---|---|---|---|---|---|---|---|
| | | ಘಟಕ ವೆಚ್ಚ ಪ್ರತಿ ಮಗ್ಗಕ್ಕೆ | ಕೇಂದ್ರ ಸಹಾಯಧನ | ರಾಜ್ಯ ಸಹಾಯಧನ | ಫಲಾನುಭವಿ ವಂತಿಗೆ | ಘಟಕ ವೆಚ್ಚ ಪ್ರತಿ ಮಗ್ಗಕ್ಕೆ | ಕೇಂದ್ರ ಸಹಾಯಧನ | ರಾಜ್ಯ ಸಹಾಯಧನ | ಫಲಾನುಭವಿ ವಂತಿಗೆ | ಘಟಕ ವೆಚ್ಚ ಪ್ರತಿ ಮಗ್ಗಕ್ಕೆ | ಕೇಂದ್ರ ಸಹಾಯಧನ | ರಾಜ್ಯ ಸಹಾಯಧನ | ಫಲಾನುಭವಿ ವಂತಿಗೆ |
| ಸಾಮಾನ್ಯ | 50 | 30000 | 15000 | 10000 | 5000 | 50000 | 25000 | 10000 | 15000 | 80000 | 40000 | 10000 | 30000 |
| ಪ.ಜಾ | 75 | 30000 | 22500 | 5000 | 2500 | 50000 | 37500 | 7500 | 5000 | 80000 | 60000 | 10000 | 20000 |
| ಪ.ವ | 90 | 30000 | 27000 | 2000 | 1000 | 50000 | 45000 | 3000 | 2000 | 80000 | 72000 | 3000 | 5000 |

ದಿನಾಂಕ 28 ಡಿಸೆಂಬರ್ 2016

(ಕೆ. ಬೋರಲಿಂಗಯ್ಯ)
ಸರ್ಕಾರದ ಉಪ ಕಾರ್ಯದರ್ಶಿ (ಜವಳಿ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

47

## ಕರ್ನಾಟಕ ಸರ್ಕಾರ

ಸಂಖ್ಯೆ: ವಾಕೈ 28 ಜಕೈಯೋ 2016

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 18.10.2016.

### ತಿದ್ದುಪಡಿ ಆದೇಶ

ಸರ್ಕಾರಿ ಆದೇಶ ಸಂಖ್ಯೆ: ವಾಕೈ 28 ಜಕೈಯೋ 2016, ಬೆಂಗಳೂರು, ದಿನಾಂಕ: 23.08.2016ರ ಆದೇಶದ ಕಂಡಿಕೆ-1 ಅನ್ನು ಈ ಕೆಳಗಿನಂತೆ ಓದಿಕೊಳ್ಳತಕ್ಕದ್ದು ಹಾಗೂ ಸದರಿ ಆದೇಶದಲ್ಲಿ ತಿಳಿಸಿದ ಉಳಿದ ಎಲ್ಲಾ ಷರತ್ತು ಮತ್ತು ನಿಬಂಧನೆಗಳು ಮುಂದುವರೆಯುತ್ತವೆ.

"ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: 1/22/2015-ಪಿಎಲ್, ದಿನಾಂಕ: 23.12.2015 ಮತ್ತು ದಿನಾಂಕ: 17.08.2016ರನ್ವಯ ಈ ಯೋಜನೆಯ ಸೌಲಭ್ಯವನ್ನು ಬೆಂಗಳೂರು, ಬೆಳಗಾವಿ, ರಬಕವಿ (ಬನಹಟ್ಟಿ) ಮತ್ತು ತಿಪಟೂರು (ತುಮಕೂರು) ಕ್ಲಸ್ಟರ್‌ಗಳ ವಿದ್ಯುತ್ ಮಗ್ಗ ನೇಕಾರರಿಗೆ ಮಾತ್ರ ಯೋಜನೆಯ ಸೌಲಭ್ಯವನ್ನು ಒದಗಿಸತಕ್ಕದ್ದು.

570
26/10/16
24 OCT 2016

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ. ಬೋರಲಿಂಗಯ್ಯ)
ಸರ್ಕಾರದ ಉಪ ಕಾರ್ಯದರ್ಶಿ (ಜವಳಿ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

**ಇವರಿಗೆ:-**

1. ಮಹಾಲೇಖಪಾಲರು (ಲೆಕ್ಕಪತ್ರ : ಲೆಕ್ಕಪರಿಶೋಧನೆ), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ,
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಇಲಾಖೆ, ಬಹುಮಹಡಿಗಳ ಕಟ್ಟಡ,
4. ಸರ್ಕಾರದ ಕಾರ್ಯದರ್ಶಿ-ವೆಚ್ಚ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
5. ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ, ನೃಪತುಂಗ ರಸ್ತೆ, ಬೆಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ, 6ನೇ ಮಹಡಿ, ಡಿ.ಜೆ.ಸಿ. ಸಂಕೀರ್ಣ, ಒಕ್ಕಲಿಗರ ಭವನ, ಕಿತ್ತೂರು ರಾಣಿ ಚೆನ್ನಮ್ಮ ವೃತ್ತ, ಬೆಂಗಳೂರು-560 027.
7. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ, ಪ್ರಿಯದರ್ಶಿನಿ ನೇಕಾರರ ಭವನ, ಹಲಸೂರು, ಬೆಂಗಳೂರು.
8. ಕಾರ್ಯದರ್ಶಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, 3ನೇ ಮಹಡಿ, ವಿಧಾನಸೌಧ, ಬೆಂಗಳೂರು.
9. ಆಂತರಿಕ ಆರ್ಥಿಕ ಸಲಹೆಗಾರರು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಬೆಂಗಳೂರು.
10. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ ವೆಚ್ಚ-1, ವಿಧಾನಸೌಧ, ಬೆಂಗಳೂರು.
11. ಸಹಾಯಕ ನಿರ್ದೇಶಕರು, ಸಂಶೋಧನಾ ಮತ್ತು ಉಲ್ಲೇಖನಾ ಶಾಖೆ, ಕರ್ನಾಟಕ ವಿಧಾನಸಭೆ ಸಚಿವಾಲಯ, ಕೋ ಸಂಖ್ಯೆ: 19, ನೆಲಮಹಡಿ, ವಿಧಾನಸೌಧ, ಬೆಂಗಳೂರು.
12. ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
13. ಜಂಟಿ ನಿರ್ದೇಶಕರು, ಜಿಲ್ಲಾ ಖಜಾನೆ, ಬೆಂಗಳೂರು
14. ಶಾಖಾ ರಕ್ಷಾ ಕಡತ : ಹೆಚ್ಚುವರಿ ಪ್ರತಿಗಳು
15. Assistant Director & OIC, Ministry of Textiles, Regional Office of the Textile Commissioner, 7 & 8, V.T.P.C, Export Bhavan, 14th Cross, Peenya, 2nd Stage, Bengaluru-560 058.
16. ಜಂಟಿ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ತುಮಕೂರು.
17. ಜಂಟಿ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ರಬಕವಿ.
18. ಜಂಟಿ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ತಿಪಟೂರು.